**Akashvani : Bangalore**
**National Bulletin In Kannada**
**05.02.2025 / 7.35 am**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**05.02.2025 / 7.35 am**

**<><*<><>*><>**

ಮುಖ್ಯಾಂಶಗಳು

**೧. ದೆಹಲಿ ವಿಧಾನಸಭೆಯ ೭೦ ಕ್ಷೇತ್ರಗಳಿಗೆ ಇಂದು ಮತದಾನ ಆರಂಭ; ೬೯೯ ಅಭ್ಯರ್ಥಿಗಳ ರಾಜಕೀಯ ಭವಿಷ್ಯ ನಿರ್ಧಾರ**

**೨. ಲೋಕಸಭೆಯಲ್ಲಿ ರಾಷ್ಟ್ರಪತಿಗಳ ಭಾಷಣದ ವಂದನಾ ನಿರ್ಣಯ ಅಂಗೀಕಾರ**

**೩. ಪ್ರಯಾಗ್‌ರಾಜ್ ಮಹಾಕುಂಭ ಮೇಳ; ಇಂದು ಪ್ರಧಾನಿ ನರೇಂದ್ರ ಮೋದಿ ಅವರಿಂದ ಅಮೃತ ಸ್ನಾನ**

**೪. ೩೮ ನೇ ರಾಷ್ಟ್ರೀಯ ಕ್ರೀಡಾಕೂಟ; ಮಹಿಳೆಯರ ೪೦೦ ಮೀಟರ್ ಫ್ರೀ ಸ್ಟೈಲ್ ಓಪನ್ ಈಜು ಸ್ಪರ್ಧೆಯಲ್ಲಿ ಕರ್ನಾಟಕದ ದಿನಿಧಿ ದೇಸಿಂಗುಗೆ ಚಿನ್ನದ ಪದಕ**

**<><*<><>*><>**

ದೆಹಲಿ ವಿಧಾನಸಭೆಯ ೭೦ ಕ್ಷೇತ್ರಗಳಿಗೆ ಇಂದು ಚುನಾವಣೆ ನಡೆಯುತ್ತಿದೆ. ಮತದಾನ ಪ್ರಕ್ರಿಯೆ ಬೆಳಗ್ಗೆ ೭ ಗಂಟೆಯಿಂದ ಆರಂಭವಾಗಿದ್ದು, ಸಂಜೆ ೬ ಗಂಟೆವರೆಗೆ ಮತದಾರರಿಗೆ ತಮ್ಮ ಹಕ್ಕು ಚಲಾಯಿಸಲು ಅವಕಾಶ ಕಲ್ಪಿಸಲಾಗಿದೆ. ಒಂದು ಕೋಟಿ ೫೬ ಲಕ್ಷಕ್ಕೂ ಹೆಚ್ಚು ಮತದಾರರು, ಕಣದಲ್ಲಿರುವ ೬೯೯ ಅಭ್ಯರ್ಥಿಗಳ ರಾಜಕೀಯ ಭವಿಷ್ಯ ನಿರ್ಧರಿಸಲಿದ್ದಾರೆ. ಆಮ್ ಆದ್ಮಿ ಪಕ್ಷದ ರಾಷ್ಟ್ರೀಯ ಸಂಚಾಲಕ ಅರವಿಂದ್ ಕೇಜ್ರಿವಾಲ್, ದೆಹಲಿ ಮುಖ್ಯಮಂತ್ರಿ ಅತಿಶಿ, ಬಿಜೆಪಿ ವಿಜೇಂದರ್ ಗುಪ್ತಾ, ಪ್ರವೇಶ್ ವರ್ಮಾ, ರಮೇಶ್ ಬಿದೂರಿ, ಕೈಲಾಶ್ ಗೆಹ್ಲೋಟ್, ಕಾಂಗ್ರೆಸ್‌ನ ಸಂದೀಪ್ ದೀಕ್ಷಿತ್, ಅರುನ್ ಯೂಸೂಫ್ ಮತ್ತು ಅಲ್ಕಾಲಂಬಾ ಕಣದಲ್ಲಿರುವ ಪ್ರಮುಖರಾಗಿದ್ದಾರೆ. ಮುಕ್ತ ನ್ಯಾಯ ಸಮ್ಮತಿ ಮತ್ತು ಶಾಂತಿಯುತ ಮತದಾನಕ್ಕಾಗಿ ಚುನಾವಣಾ ಆಯೋಗ ವ್ಯಾಪಕ ಸಿದ್ಧತೆ ಮಾಡಿಕೊಂಡಿದೆ. ೧೩ ಸಾವಿರಕ್ಕೂ ಹೆಚ್ಚು ಮತಗಟ್ಟೆಗಳನ್ನು ಸ್ಥಾಪಿಸಲಾಗಿದ್ದು, ಇದರಲ್ಲಿ ೭೦ ಸಂಪೂರ್ಣ ಮಹಿಳೆಯರು ನಿರ್ವಹಿಸುವ ಮತಗಟ್ಟೆಗಳಾಗಿವೆ. ಹಾಗೆಯೇ ೭೦

ಮತಗಟ್ಟೆಗಳನ್ನು ವಿಶೇಷ ಚೇತನರು ನಿರ್ವಹಿಸಲಿದ್ದಾರೆ. ಒಂದು ಕೋಟಿ ೫೬ ಲಕ್ಷಕ್ಕೂ ಹೆಚ್ಚು ಮತದಾರರಲ್ಲಿ ೮೩ ಲಕ್ಷ ಪುರುಷ, ೭೨ ಲಕ್ಷ ಮಹಿಳೆಯ ೧ ಸಾವಿರದ ೨೬೭ ತೃತೀಯ ಲಿಂಗಿ ಮತದಾರರು ಸೇರಿದ್ದಾರೆ. ಇವರಲ್ಲಿ ೧೦೦ ವರ್ಷ ಮೇಲ್ಪಟ್ಟ ೭೮೩ ಮತದಾರರಿದ್ದಾರೆ. ಸುಗಮ ಚುನಾವಣೆಗಾಗಿ ಚುನಾವಣಾ ಆಯೋಗ ೧ ಲಕ್ಷದ ೮೦ ಸಾವಿರಕ್ಕೂ ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸಿದೆ. ಇಲ್ಲಿಯವರೆಗೆ ಸುಮಾರು ೨೨೦ ಕೋಟಿಗೂ ಅಧಿಕ ಮೌಲ್ಯದ ನಗದು, ಮದ್ಯ, ಮಾದಕ ದ್ರವ್ಯ, ಉಚಿತ ಸಾಮಗ್ರಿಗಳನ್ನು ವಶಪಡಿಸಿಕೊಳ್ಳಲಾಗಿದೆ. ರಾಷ್ಟ್ರ ರಾಜಧಾನಿಯ ಎಲ್ಲಾ ಮತದಾರರು, ಮತದಾನದಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ಪ್ರಜಾಪ್ರಭುತ್ವದ ಈ ಹಬ್ಬದಲ್ಲಿ ತಮ್ಮ ಪಾತ್ರ ವಹಿಸಬೇಕು ಎಂದು ದಹಲಿ ಲೆಫ್ಟಿನೆಂಟ್ ಗವರ್ನರ್ ವಿನಯ್ ಕುಮಾರ್ ಸೆಕ್ಸೆನಾ ಕೋರಿದ್ದಾರೆ.

**<><*<><>*><>**

ಸಂಸತ್ತಿನ ಉಭಯ ಸದನಗಳ ಜಂಟಿ ಅಧಿವೇಶನವನ್ನು ಉದ್ದೇಶಿಸಿ ರಾಷ್ಟ್ರಪತಿಯವರು ಮಾಡಿದ ಭಾಷಣದ ವಂದನಾ ನಿರ್ಣಯವನ್ನು ಲೋಕಸಭೆ ನಿನ್ನೆ ಅಂಗೀಕರಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಉತ್ತರದ ನಂತರ ನಿನ್ನೆ ಧ್ವನಿ ಮತದ ಮೂಲಕ ಈ ನಿರ್ಣಯವನ್ನು ಅಂಗೀಕರಿಸಲಾಯಿತು. ಸದನದಲ್ಲಿ ನಡೆದ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಉತ್ತರಿಸಿದ ಪ್ರಧಾನಿ, ಸಂವಿಧಾನದಲ್ಲಿ ಪ್ರತಿಪಾದಿಸಲಾದ ಮೌಲ್ಯಗಳನ್ನು ಬಲಪಡಿಸುವ ತಮ್ಮ ಸರ್ಕಾರ ಬದ್ಧವಾಗಿದೆ. ತಮ್ಮ ಸರ್ಕಾರ ಬಡ ಜನರ ಕಲ್ಯಾಣಕ್ಕಾಗಿ ಹಲವಾರು ಕ್ರಮಗಳನ್ನು ತೆಗೆದುಕೊಂಡಿದೆ, ಇದರ ಪರಿಣಾಮವಾಗಿ ೨೫ ಕೋಟಿ ಜನರನ್ನು ಬಡತನದಿಂದ ಮೇಲಕ್ಕೆತ್ತಲಾಗಿದೆ ಎಂದು ಪ್ರಧಾನಿ ಹೇಳಿದರು. ೧೦೦ ಪ್ರತಿಶತ ಯೋಜನೆಗಳ ಪರಿಪೂರ್ಣ ಅನುಷ್ಠಾನಕ್ಕೆ ಒತ್ತು ನೀಡುವ ಮೂಲಕ ವಿಕಸಿತ ಭಾರತದ ಗುರಿಯನ್ನು ಸಾಧಿಸಲು ತಮ್ಮ ಸರ್ಕಾರ ಕೆಲಸ ಮಾಡುತ್ತಿದೆ ರಾಷ್ಟ್ರಪತಿಗಳ ಭಾಷಣ ವಿಕಸಿತ ಭಾರತದ ಸಂಕಲ್ಪವನ್ನು ಬಲಪಡಿಸುವ ಜೊತೆಗೆ, ಹೊಸ ಭರವಸೆಗಳನ್ನು ನೀಡಿ, ಜನರಿಗೆ ಸ್ಫೂರ್ತಿ ನೀಡುತ್ತದೆ ಎಂದು ಪ್ರಧಾನಿ ಪ್ರತಿಪಾದಿಸಿದರು.

**ಧ್ವನಿ: ಪ್ರಧಾನಿ ನರೇಂದ್ರ ಮೋದಿ ( ೩೧ ಸೆಕೆಂಡ್)**

ತಮ್ಮ ಅಧಿಕಾರಾವಧಿಯಲ್ಲಿ ಬಂಡವಾಳ ವೆಚ್ಚಕ್ಕಾಗಿ ಬಜೆಟ್ ಹಂಚಿಕೆಗಳು ಭಾರಿ ಏರಿಕೆ ಕಂಡಿವೆ ಮತ್ತು ಅದನ್ನು ೧೧ ಲಕ್ಷ ೨೧ ಸಾವಿರ ಕೋಟಿ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ ಎಂದ ಅವರು, ಸರ್ಕಾರವು ಆಡಳಿತದಲ್ಲಿ ಪಾರದರ್ಶಕತೆಯನ್ನು ತಂದಿದೆ, ಇದರಿಂದಾಗಿ ಕೋಟ್ಯಂತರ ರೂಪಾಯಿ

ಉಳಿತಾಯವಾಗಿದೆ ಎಂದು ಹೇಳಿದರು. ಸರಿಯಾದ ಫಲಾನುಭವಿಗಳನ್ನು ಗುರುತಿಸುವ ಮೂಲಕ ಮೂರು ಲಕ್ಷ ಕೋಟಿ ರೂಪಾಯಿಗಳನ್ನು ಉಳಿಸಲಾಗಿದೆ ಎಂದು ಅವರು ತಿಳಿಸಿದರು. ಇತ್ತೀಚೆಗೆ ಸರ್ಕಾರವು ೧೨ ಲಕ್ಷ ರೂಪಾಯಿಗಳವರೆಗೆ ಆದಾಯ ತೆರಿಗೆ ರಿಯಾಯಿತಿಯನ್ನು ಘೋಷಿಸಿದೆ, ಇದು ಮಧ್ಯಮ ವರ್ಗದ ಆರ್ಥಿಕ ಸ್ಥಿತಿ ಬಲಪಡಿಸುವ ಪ್ರಮುಖ ಹೆಜ್ಜೆಯಾಗಿದೆ. ಪ್ರಧಾನಿಯವರು ತಮ್ಮ ಸರ್ಕಾರವು ದೇಶದ ಯುವಕರಿಗೆ ಉದ್ಯೋಗಾವಕಾಶಗಳನ್ನು ಹೆಚ್ಚಿಸಿದೆ. ಎಐ ಎಂದರೆ ಕೃತಕ ಬುದ್ಧಿಮತ್ತೆ ಮಾತ್ರವಲ್ಲ, ಮಹತ್ವಾಕಾಂಕ್ಷೆಯ ಭಾರತವೂ ಆಗಿದೆ ಎಂದ ಅವರು, ತಮ್ಮ ಸರ್ಕಾರವು ಮಹತ್ವಾಕಾಂಕ್ಷೆಯ ಭಾರತವನ್ನು ನಿರ್ಮಿಸಲು ಎಐ ನ ಶಕ್ತಿಯನ್ನು ಬಳಸಿಕೊಳ್ಳುತ್ತಿದೆ ಎಂದು ಅವರು ಹೇಳಿದರು. ಎನ್‌ಡಿಎ ಸರ್ಕಾರವು ಬುಡಕಟ್ಟು ಜನಾಂಗದವರಿಗೆ ಪ್ರತ್ಯೇಕ ಸಚಿವಾಲಯವನ್ನು ರಚಿಸಿದ್ದು, ಬಡವರು ಮತ್ತು ವೃದ್ಧರಿಗಾಗಿ ಆಯುಷ್ಮಾನ್ ಭಾರತವನ್ನು ಪ್ರಾರಂಭಿಸಿದೆ. ೩೭೦ ನೇ ವಿಧಿಯನ್ನು ರದ್ದುಗೊಳಿಸುವ ಮೂಲಕ, ಜಮ್ಮು-ಕಾಶ್ಮೀರ ಮತ್ತು ಲಡಾಖ್ ಪ್ರದೇಶಗಳ ಜನರು ಈಗ ದೇಶದ ಇತರ ನಾಗರಿಕರಂತೆಯೇ ಸಮಾನ ಹಕ್ಕುಗಳನ್ನು ಪಡೆಯುತ್ತಾರೆ ಎಂದು ಪ್ರಧಾನಿ ತಿಳಿಸಿದರು. ತಮ್ಮ ಸರ್ಕಾರವು ಜನರ ಅಭಿವೃದ್ಧಿ ಮತ್ತು ಸಮೃದ್ಧಿಯಲ್ಲಿ ನಂಬಿಕೆ ಇಡುತ್ತದೆ ಎಂದ ಪ್ರಧಾನಿ, ರಾಷ್ಟ್ರಪತಿಗಳ ವಿರುದ್ಧ ಮಾಡಲಾದ ಆರೋಪಗಳನ್ನು ತಳ್ಳಿಹಾಕಿದರು.

**<><*<><>*><>**

ಪ್ರಧಾನಿ ನರೇಂದ್ರ ಮೋದಿ ಅವರಿಂದು ಉತ್ತರಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳಕ್ಕೆ ಭೇಟಿ ನೀಡಲಿದ್ದು, ಅಮೃತ ಸ್ನಾನ ಮಾಡಲಿದ್ದಾರೆ. ಈ ವೇಳೆ ಅವರೊಂದಿಗೆ ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಉಪಸ್ಥಿತರಿರಲಿದ್ದಾರೆ. ಇದೇ ವೇಳೆ ಪ್ರಧಾನಿ, ತ್ರಿವೇಣಿ ಸಂಗಮದಲ್ಲಿ ಪೂಜೆ ಸಲ್ಲಿಸಲಿದ್ದು, ಸಂತರು ಹಾಗೂ ಸಾಧುಗಳನ್ನು ಭೇಟಿಯಾಗಲಿದ್ದಾರೆ. ಜನವರಿ ೧೩ ರಂದು ಆರಂಭವಾಗಿರುವ ಮಹಾಕುಂಭಮೇಳದಲ್ಲಿ ಈವರೆಗೆ ೩೮ ಕೋಟಿಗೂ ಅಧಿಕ ಭಕ್ತಾದಿಗಳು ತ್ರಿವೇಣಿ ಸಂಗಮದಲ್ಲಿ ಅಮೃತ ಸ್ನಾನ ಮಾಡಿದ್ದಾರೆ.

**<><*<><>*><>**

ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್‌ಸಿಂಗ್ ಚೌಹಾಣ್ ಅವರು ಇಂದು ಹೈಬ್ರಿಡ್ ಮಾದರಿಯಲ್ಲಿ ದೇಶವ್ಯಾಪಿ ಜಲಕ್ಷೇತ್ರ ಯಾತ್ರೆಗೆ ಚಾಲನೆ ನೀಡಲಿದ್ದಾರೆ. ಈ ಅಭಿಯಾನ 'ಜಲ್ ಲಾಯೆ, ಧನ ಧಾನ್ಯ' ಘೋಷವಾಕ್ಯದದೊಂದಿಗೆ ಆರಂಭವಾಗಲಿದ್ದು, ಜಲಕ್ಷೇತ್ರ ಅಭಿವೃದ್ಧಿ ಚಟುವಟಿಕೆಗಳ ಕುರಿತು ಜನರಲ್ಲಿ ಅರಿವು ಮೂಡಿಸುವ ಗುರಿ ಹೊಂದಿದೆ. 'ಪ್ರಧಾನಮಂತ್ರಿ ಕೃಷಿ

ಸಿಂಚಾಯಿ ಯೋಜನೆ ೨.೦ ಯ ಭಾಗವಾಗಿರುವ ಈ ಅಭಿಯಾನ, ಕೃಷಿ ಮತ್ತು ಜೀವನೋಪಾಯ ಮತ್ತು ಪರಿಸರ ಆರೋಗ್ಯ ಬಲಪಡಿಸುವಲ್ಲಿ  ಸುಸ್ಥಿರ ನೈಸರ್ಗಿಕ ಸಂಪನ್ಮೂಲಗಳ ಪಾತ್ರದ ಕುರಿತು ತಿಳಿಸುತ್ತದೆ. ಈ ಕುರಿತು ನಿನ್ನೆ ಮಾಧ್ಯಮಗಳಿಗೆ ಮಾಹಿತಿ ನೀಡಿದ ಅವರು, ಈ ಅಭಿಯಾನದ ಮೂಲಕ ಜಲ ಸಂರಕ್ಷಣೆ, ಮಣ್ಣಿನ ಸವೆತ ತಡೆಗಟ್ಟುವಿಕೆ ಕುರಿತು ಜನರಲ್ಲಿ ಜಾಗೃತಿ ಮೂಡಿಸಲಾಗುವುದು. ಇದರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಭಾಗವಹಿಸಬೇಕು ಎಂದು ಅವರು ಕರೆ ನೀಡಿದರು.

**ಧ್ವನಿ: ಶಿವರಾಜ್ ಸಿಂಗ್ ಚೌಹಾಣ್ ( ೨೦ ಸೆಕೆಂಡ್)**

**<><*<><>*><>**

ಇದೇ ೧೦ ರಿಂದ ೧೪ರವರೆಗೆ ಬೆಂಗಳೂರಿನ ಯಲಹಂಕದಲ್ಲಿ ಏರೋ ಇಂಡಿಯಾ ವೈಮಾನಿಕ ಪ್ರದರ್ಶನ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಇಂದಿನಿಂದ ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ವಿಮಾನಗಳ ಸಂಚಾರದಲ್ಲಿ ವ್ಯತ್ಯಯವಾಗಲಿದೆ. ಇಂದಿನಿಂದ ಆರಂಭಗೊಂಡು ಕೆಲವು ತಾಸು ವಿಮಾನ ನಿಲ್ದಾಣದಲ್ಲಿ ಟೇಕಾಫ್, ಲ್ಯಾಂಡಿಂಗ್ ಸ್ಥಗಿತಗೊಳ್ಳಲಿದೆ. ಏರ್ ಶೋ ಕಾರ್ಯಕ್ರಮದ ಸುರಕ್ಷತೆಯ ದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಬೆಂಗಳೂರು ವಿಮಾನ ನಿಲ್ದಾಣ ಆಡಳಿತ ಮಾಹಿತಿ ನೀಡಿದೆ. ಈ ನಡುವೆ ವೈಮಾನಿಕ ಪ್ರದರ್ಶನಕ್ಕೆ ಭೇಟಿ ನೀಡುವ ಎಲ್ಲ ಜನರ ಸುರಕ್ಷತೆ ಖಾತರಿಪಡಿಸಿಕೊಳ್ಳಲು ಗೃಹ ಸಚಿವಾಲಯ, ಬೆಂಗಳೂರು ಪೊಲೀಸ್, ಸಿಐಎಸ್‌ಎಫ್ ಮತ್ತು ಗುಪ್ತಚರ ಸಂಸ್ಥೆಗಳ ಸಹಯೋಗದೊಂದಿಗೆ ಬಹು ಹಂತದ ಭದ್ರತಾ ವ್ಯವಸ್ಥೆ ನಿಯೋಜಿಸಲಾಗುತ್ತಿದೆ. ದಿನದ ೨೪ ಗಂಟೆಯೂ ಸಿಸಿಟಿವಿ ಮೇಲ್ವಿಚಾರಣೆ ಇರಲಿದೆ. ಪ್ರದರ್ಶನ ಸ್ಥಳದಲ್ಲಿ ಸಂದರ್ಶಕರ ಸುಗಮ ಸಂಚಾರಕ್ಕಾಗಿ ೧೦೦ಕ್ಕೂ ಅಧಿಕ ಇ-ಕಾರ್ಟ್‌ಗಳ ವಿಶೇಷ ಬಳಕೆಗೆ ನಿರ್ಧರಿಸಲಾಗಿದೆ. ಅಲ್ಲದೇ ಈ ಪ್ರದೇಶದಲ್ಲಿ ಅನಧಿಕೃತ ಡ್ರೋನ್ ಚಟುವಟಿಕೆ ನಿರ್ವಹಿಸಲು ನಿಗ್ರಹ ಕ್ರಮಗಳೊಂದಿಗೆ ಕೆಂಪು ಡ್ರೋನ್ ವಲಯಗಳನ್ನು ಗೊತ್ತುಪಡಿಸಲಾಗಿದೆ.

**<><*<><>*><>**

ವಿಶ್ವ ಆಡಿಯೋ-ವಿಜುವಲ್ ಮತ್ತು ಮನರಂಜನಾ ಶೃಂಗಸಭೆ- ವೇವ್ಸ್-೨೦೨೫, ನಕಲಿ ಮಾಹಿತಿ ವಿರುದ್ಧ ಹೋರಾಡಲು ಕೃತಕ ಬುದ್ಧಿಮತ್ತೆ-ಎಐ, ಆಧಾರಿತ ಪರಿಹಾರಗಳನ್ನು ಅನಾವರಣಗೊಳಿಸಲಿದೆ. ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ, ಈ ಬಾರಿಯ 'ಟ್ರೂತ್ ಟೆಲ್ ಹ್ಯಾಕಥಾನ್' ಚಾಲೆಂಜ್, ವೇವ್ಸ್ ಸಮಾರಂಭದ ಒಂದು ಭಾಗವಾಗಿದ್ದು,

ನೇರ ಪ್ರಸಾರದಲ್ಲಿನ ತಪ್ಪು ಮಾಹಿತಿಯನ್ನು ತಡೆಯಲು ಅಗತ್ಯ ಪರಿಹಾರಗಳನ್ನು ಒದಗಿಸುವ ಕ್ರಮವಾಗಿದೆ.

**<><*<><>*><>**

ಉತ್ತಾರಖಂಡದ ಡೆಹರಾಡೂನ್‌ನಲ್ಲಿ ನಡೆಯುತ್ತಿರುವ ೩೮ನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ನಿನ್ನೆ ಮಹಿಳೆಯರ ೪೦೦ ಮೀಟರ್ ಫ್ರೀ ಸ್ಟೈಲ್ ಓಪನ್ ಈಜು ಸ್ಪರ್ಧೆಯಲ್ಲಿ ನೂತನ ದಾಖಲೆ ನಿರ್ಮಿಸಿರುವ ಕರ್ನಾಟಕದ ದಿನಿಧಿ ದೇಸಿಂಗು ಚಿನ್ನದ ಪದಕ ವಿಜೇತರಾಗಿದ್ದಾರೆ. ಇದೇ ವೇಳೆ ದೆಹಲಿಯ ಭವ್ಯ ಸಚ್‌ದೇವ್ ಬೆಳ್ಳಿ ಮತ್ತು ಮಹಾರಾಷ್ಟ್ರದ ಅದಿತಿ ಸತಿಶ್ ಹೆಗಡೆ ಕಂಚಿನ ಪದಕ ಗಳಿಸಿದ್ದಾರೆ.  ಪುರುಷರ ೫೦ ಮೀಟರ್ ಬ್ಯಾಕ್ ಸ್ಟ್ರೋಕ್ ಈಜು ಸ್ಪರ್ಧೆಯಲ್ಲಿ ಕರ್ನಾಟಕದವರಾದ ಶ್ರೀಹರಿ ನಟರಾಜ್ ಚಿನ್ನದ ಪದಕ ಹಾಗೂ ಆಕಾಶ್ ಮಣಿ ಬೆಳ್ಳಿ ಮತ್ತು ಮಹಾರಾಷ್ಟ್ರದ ರಿಷಬ್ ಕಂಚಿನ ಪದಕ ಗಳಿಸಿದ್ದಾರೆ. ಪುರುಷರ ೮೦೦ ಮೀಟರ್ ಫ್ರೀ ಸ್ಟೈಲ್ ಓಪನ್ ಈಜು ಸ್ಪರ್ಧೆಯಲ್ಲಿ ದೆಹಲಿಯ ಕುಶಾಗ್ರಾ ರಾವತ್ ಚಿನ್ನ, ಗುಜರಾತ್ ಆರ್ಯನ್ ನೆಹ್ರಾ ಬೆಳ್ಳೆ ಮತ್ತು ಕರ್ನಾಟಕದ ಅನೀಶ್ ಎಸ್. ಗೌಡ ಕಂಚಿನ ಪದಕ ಗಳಿಸಿದ್ದಾರೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ <>*><>**